# ಹರಿಯ ಸಿನಿಮಾ ಪ್ರೇಮಕಥೆ!

**ರಂಗಭೂಮಿ ಹಿನ್ನೆಲೆಯಿಂದ ಬಂದಿರುವ ಪ್ರತಿಭಾವಂತ ನಟ ಹರಿಶರ್ವ. ಭಿನ್ನ ಪಾತ್ರಗಳನ್ನು ಅರಸುತ್ತಲೇ ಬರವಣಿಗೆಗೂ ತೊಡಗಿಕೊಂಡಿರುವ ಅವರಿಗೆ ಮುಂದೆ ನಿರ್ದೇಶನ ಮಾಡುವ ಕನಸೂ ಇದೆ.**

**■ ಪದ್ಮನಾಭ ಭಟ್**



ಈಗ ಒಂದೂವರೆ ವರ್ಷದ ಹಿಂದೆ ನಡುರಾತ್ರಿಯಲ್ಲಿ, ಬೆಂಗಳೂರಿನ ನಿರ್ಜನ ಬೀದಿಯಲ್ಲಿ ನಟ ಹರಿಶರ್ವ ಮತ್ತು ಯುವ ನಿರ್ದೇಶಕ ಪ್ರವೀಣ್‌ಕುಮಾರ್ ಜಿ. ಮಾತಾಡುತ್ತ ಅಲೆದಾಡುತ್ತಿದ್ದರು. ಆಗ ಯಾರೋ ನಾಲ್ಕಾರು ಜನರು ಅವರನ್ನು ಅಟ್ಟಿಸಿಕೊಂಡು ಬಂದರು. ಕೈಗೆ ಸಿಕ್ಕ ಕಲ್ಲನ್ನು ಹಿಡಿದು ಇಬ್ಬರೂ ಓಡಿದ್ದೇ ಓಡಿದ್ದು. ಪ್ರವೀಣ್ ಅವರ ಮನೆಯ ಒಳಗೆ ಹೊಕ್ಕು ಬಾಗಿಲು ಹಾಕಿಕೊಂಡಿದ್ದೇ ಉಸಿರೆಳೆದು ನಗಲು ಶುರುಮಾಡಿದರು. ಕ್ಷಣದ ಹಿಂದೆ ಭಯ ಹುಟ್ಟಿಸಿದ್ದ ಆ ಸನ್ನಿವೇಶ ಈಗ ನಗುವಿಗೆ ಕಾರಣವಾಗಿತ್ತು. ಇಬ್ಬರೂ ಬಿದ್ದು ಬಿದ್ದು ನಕ್ಕರು. ಪಕ್ಕದಲ್ಲಿ ನಗುತ್ತಿದ್ದ ಹರಿಶರ್ವ ಮುಖದಲ್ಲಿ ಪ್ರವೀಣ್ ಅವರಿಗೆ ತಮ್ಮ ಸಿನಿಮಾದ ನಾಯಕ ಕಾಣಿಸಿದ್ದ. ಪರಿಣಾಮವಾಗಿ ಈಗ ಪ್ರವೀಣ್ ನಿರ್ದೇಶನದ 'ಅಮರಪ್ರೇಮಿ ಅರುಣ್' ಸಿನಿಮಾಗೆ ಹರಿಶರ್ವ ನಾಯಕ.

ಹರಿ ಶಿವಮೊಗ್ಗದ ಹುಡುಗ. ಎಂಜಿನಿಯರಿಂಗ್ ಮುಗಿಸಿ ಬೆಂಗಳೂರಿಗೆ ಬಂದು ಐಟಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ ಅವರಿಗೆ ಆರ್.ಜೆ. ಆಗಬೇಕು ಎಂಬ ಹುಚ್ಚಿತ್ತು. ಒಮ್ಮೆ ಭೇಟಿಯಾದ ನಿರ್ದೇಶಕ ಬಿ. ಸುರೇಶ್, 'ಮಾತೇ ಆಡಲ್ಲ ನೀನು... ಆರ್.ಜೆ. ಹೇಗಾಗ್ತೀಯಾ? ಹೋಗು ರಂಗಭೂಮಿ ಸೇರಿಕೊ... ಮಾತಾಡೋಕೆ ಕಲೀತೀಯ' ಎಂದು ಗದ್ದ ಸವರಿದ್ದರು. ಅವರ ಮಾತನ್ನೇ ಪ್ರೇರಣೆಯಾಗಿಟ್ಟುಕೊಂಡ ಹರಿಶರ್ವ, 'ಅಭಿನಯ ತರಂಗ'ದಲ್ಲಿ ಒಂದು ವರ್ಷದ ನಟನಾ ಕಲಿಕೆಯ ಕೋರ್ಸ್ ಮಾಡಿದರು. ನಂತರ ಮಂಜುನಾಥ ಬಡಿಗೇರ್, ಪ್ರಕಾಶ ಬೆಳವಾಡಿ, ಪ್ರಮೋದ್ ಶಿಗ್ಗಾವ್ ಸೇರಿದಂತೆ ಹಲವು ನಿರ್ದೇಶಕರ ನಾಟಕಗಳಲ್ಲಿ ನಟಿಸಿದರು. ಅವರು ನಟಿಸಿದ ಹದಿನಾರು ನಾಟಕಗಳು ಎಪ್ಪತ್ತಕ್ಕೂ ಅಧಿಕ ಪ್ರದರ್ಶನಗಳನ್ನು ಕಂಡಿವೆ.

ನಾಟಕದ ಅಭಿನಯವೇ ಅವರನ್ನು ಧಾರಾವಾಹಿ ಜಗತ್ತಿನ ಹೆಬ್ಬಾಗಿಲಿಗೂ ತಲುಪಿಸಿತು. ಜಿ ಕನ್ನಡದಲ್ಲಿ ಪ್ರಸಾರವಾದ 'ರಾಧಾ ಕಲ್ಯಾಣ' ಧಾರಾವಾಹಿಯಲ್ಲಿ ಆ್ಯಂಟಿ ಹೀರೊ ಪಾತ್ರದಲ್ಲಿ ಮಿಂಚಿದರು.

ಈ ನಡುವೆ ರಂಗಭೂಮಿಯಲ್ಲಿಯೂ ಸಕ್ರಿಯರಾಗಿದ್ದ ಹರಿಶರ್ವ ಅವರು ಬರೆದಿರುವ ಒಂದು ನಾಟಕಕ್ಕೆ ಅತ್ಯುತ್ತಮ ನಾಟಕ, ಅತ್ಯುತ್ತಮ ಬರವಣಿಗೆಯ ಬಹುಮಾನವೂ ಸಂದಿತು. ನಾಗರಾಜ ಸೋಮಯಾಜಿ ನಿರ್ದೇಶನದ 'ಮೌನ' ನಾಟಕದಲ್ಲಿ ಹರಿಶರ್ವ ನೆರಳಿನ ಪಾತ್ರದಲ್ಲಿ ನಟಿಸಿದ್ದಾರೆ. ಇಡೀ ನಾಟಕದಲ್ಲಿ ಅವರ ಮುಖ ವೇದಿಕೆಯ ಮೇಲೆ ಬರುವುದೇ ಇಲ್ಲ. ನೆರಳು ಮತ್ತು ಧ್ವನಿಯಷ್ಟೇ ಇರುತ್ತವೆ. ಆ ನಾಟಕ ನೋಡಲು ಬಂದಿದ್ದ ಪ್ರವೀಣ್‌ಕುಮಾರ್ ಜಿ. ಅವರಿಗೆ ಇದು ಇಷ್ಟವಾಯ್ತು. ಹಾಗಾಗಿಯೇ ಹರಿಶರ್ವ ಅವರನ್ನು ಹುಡುಕಿಕೊಂಡು ಹೋಗಿ, 'ಕಹಿ ಸಿನಿಮಾದ ಆಡಿಷನ್‌ಗೆ ಬನ್ನಿ' ಎಂದು ಕರೆದರು. ಅಲ್ಲಿಂದ ಹರಿಶರ್ವ ಅವರ ಸಿನಿಮಾ ಪ್ರಯಾಣ ಶುರುವಾಯ್ತು. ಅರವಿಂದ್ ಶಾಸ್ತ್ರಿ ನಿರ್ದೇಶನದ 'ಕಹಿ', ಹರಿ ನಟನೆಯ ಮೊದಲ ಸಿನಿಮಾ. ಆ ಸಿನಿಮಾ ವ್ಯಾಪಾರಿದೃಷ್ಟಿಯಿಂದ ಗೆಲ್ಲದಿದ್ದರೂ ವಿಮರ್ಶಕರ ಮೆಚ್ಚುಗೆ ಪಡೆಯಿತು.

'ಕಹಿ ಸಿನಿಮಾದ ನನ್ನ ಪಾತ್ರಕ್ಕೆ ಸಾಕಷ್ಟು ಮೆಚ್ಚುಗೆ ಬಂತು. ಇದೇ ಒಂದು ರೀತಿಯಲ್ಲಿ ನನಗೆ ತೊಡಕೂ ಆಯಿತು. ಎಷ್ಟೋ ಜನರು, ಕಹಿ ಸಿನಿಮಾದಲ್ಲಿ ನೀವು ಎಷ್ಟು ಒಳ್ಳೆಯ ಪಾತ್ರದಲ್ಲಿ ನಟಿಸಿದ್ದೀರಿ; ನಿಮಗೆ ಹೇಗೆ ಸಣ್ಣಪುಟ್ಟ ಪಾತ್ರ ಕೊಡುವುದು ಎಂದು ಹೇಳಿ ಅವಕಾಶವನ್ನೇ ಕೊಡಲಿಲ್ಲ. ಆದರೆ ಒಳ್ಳೆಯ ಪಾತ್ರ ಎಷ್ಟೇ ಚಿಕ್ಕದಾಗಿದ್ದರೂ ನಟಿಸಲು ನಾನು ಸಿದ್ಧನಿದ್ದೆ' ಎಂದು ನೆನಪಿಸಿಕೊಳ್ಳುತ್ತಾರೆ ಹರಿ.

'ಹೊಂದಿಸಿ ಬರೆಯಿರಿ' ಸಿನಿಮಾದಲ್ಲಿ ಹರಿ